ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

7

ಇಲಾಖೆ / ವಿಷಯ : DEPARTMENT / SUBJECT: ಸಾರಿಗೆ ಇಲಾಖೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ　　ದಿನಾಂಕ : DATE: 9/4/21


# ಸಾರಿಗೆ ನೌಕರರ ವಿರುದ್ಧ ವಜಾಸ್ತ್ರ

ಉವಾ 9/4/21

## ಮುಷ್ಕರ ನಿರತ 96 ತರಬೇತಿ ನೌಕರರ ವಜಾ



**ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿ ಬಸ್ಸುಗಳಿಲ್ಲದೇ ಪರದಾಡಿದ ಪ್ರಯಾಣಿಕರು.**

ಬೆಂಗಳೂರು: ಮುಷ್ಕರ ನಡೆಸುತ್ತಿರುವ ಸಾರಿಗೆ ನೌಕರರ ವಿರುದ್ಧ 'ವಜಾ' ಅಸ್ತ್ರ ಪ್ರಯೋಗ ಮಾಡಿರುವ ರಾಜ್ಯ ಸರ್ಕಾರ, ಗುರುವಾರ ಕೆಲಸಕ್ಕೆ ಹಾಜರಾಗದ 96 ತರಬೇತಿ ನೌಕರರನ್ನು ಮನೆಗೆ ಕಳುಹಿಸಿದೆ. ಅಷ್ಟೇ ಅಲ್ಲ, ಪ್ರೊಬೆಷನರಿಯಲ್ಲಿದ್ದವರಿಗೆ ಕರ್ತವ್ಯಕ್ಕೆ ಬರಲು ಶುಕ್ರವಾರದ ಗಡುವನ್ನೂ ವಿಧಿಸಿದೆ. ಬಸ್ ಸಂಚಾರವನ್ನು ಸುಗಮವಾಗಿಡುವ ಸಂಬಂಧ ನಿವೃತ್ತ ನೌಕರರಿಗೂ ಬುಲಾವ್ ನೀಡಿದೆ.

ಈ ಯಾವುದೇ ಕ್ರಮಗಳಿಗೂ ಮಣಿಯದ ಸಾರಿಗೆ ನೌಕರರು ಹೋರಾಟ ಮುಂದುವರಿಸುವ ಸುಳಿವು ನೀಡಿದ್ದಾರೆ. ಹೀಗಾಗಿ, ಮುಷ್ಕರ ಮುಂದುವರಿಯುವುದು ಸ್ಪಷ್ಟವಾಗಿದ್ದು ಯುಗಾದಿ ವೇಳೆಗೆ ಇದರ ಬಿಸಿ ಜೋರಾಗಿ ತಟ್ಟುವ ಸಾಧ್ಯತೆ ಇದೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿ ಕರ್ತವ್ಯಕ್ಕೆ ಹಾಜರಾಗದ ತರಬೇತಿ ನೌಕರರನ್ನು ವಜಾಗೊಳಿಸುವುದಾಗಿ ಬುಧವಾರ ಸರ್ಕಾರ ಎಚ್ಚರಿಕೆ ನೀಡಿತ್ತು. ಈ ಪೈಕಿ ಬಿಎಂಟಿಸಿಯಲ್ಲಿ ಹೆಚ್ಚು ಗೈರುಹಾಜರಿ ಮತ್ತು ಅಸಮರ್ಪಕ ಸೇವೆ ನೆಪದಲ್ಲಿ ಗುರುವಾರ 96 ಜನ ತರಬೇತಿ ನೌಕರರ ಪಟ್ಟಿ ಮಾಡಿ, ಕಾಯಂ ಆಗಿ ಆಯ್ಕೆ ಪಟ್ಟಿಯಿಂದ ತೆಗೆದುಹಾಕಲಾಗಿದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪ್ರೊಬೆಷನರಿ ಯಲ್ಲಿದ್ದವರಿಗೂ ಇಂಥದ್ದೇ 'ಶಾಕ್' ಕಾದಿದೆ ಎಂದು ನೋಟಿಸ್ ನೀಡಲಾಗಿದೆ. ಈ ಪಟ್ಟಿಯಲ್ಲಿ 1,293 ನೌಕರರಿದ್ದಾರೆ. ಉಳಿದ ನಿಗಮಗಳಲ್ಲೂ ಇದನ್ನು ಅನುಸರಿಸಲು ಸಿದ್ಧತೆ ನಡೆದಿದೆ.

> **ಪರ್ಮಿಟ್ ಇಲ್ಲದೆ ಖಾಸಗಿ ಬಸ್ ಸಂಚರಿಸಲು ಮುಂದಿನ ಆದೇಶದವರೆಗೂ ಅವಕಾಶ ನೀಡಿದ್ದೇವೆ. ರಸ್ತೆ ತೆರಿಗೆ ಕಟ್ಟಲು ಸಾಧ್ಯವಾಗದೆ ಪರ್ಮಿಟ್ ಒಪ್ಪಿಸಿದ್ದ 18 ಸಾವಿರ ಬಸ್‌ಗಳಿಗೆ ತಿಂಗಳ ಮಟ್ಟಿಗೆ ವಿನಾಯಿತಿ ನೀಡಿದ್ದೇವೆ.**
>
> **• ಅಂಜುಂ ಫರ್ವೇಜ್, ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ**

ಮತ್ತೊಂದೆಡೆ ಇದಕ್ಕೆ ಪರ್ಯಾಯವಾಗಿ 62 ವರ್ಷ ಮೀರದ ನಿವೃತ್ತ ಚಾಲಕ, ನಿರ್ವಾಹಕರನ್ನು ತಾತ್ಕಾಲಿಕ ಒಪ್ಪಂದದ ಆಧಾರದಲ್ಲಿ ನಿಯೋಜಿಸಲು ತೀರ್ಮಾನಿಸಲಾಗಿದೆ. ಪ್ರತಿ ವರ್ಷ ನಾಲ್ಕೂ ನಿಗಮಗಳು ಸೇರಿ ಸರಾಸರಿ ಎರಡು ಸಾವಿರ ನೌಕರರು ನಿವೃತ್ತರಾಗುತ್ತಾರೆ. ಮೂರು ವರ್ಷಗಳ ಲೆಕ್ಕಹಾಕಿದರೆ, ಅಂದಾಜು 6 ಸಾವಿರ ಜನ ಈ ವರ್ಗದವರಿದ್ದಾರೆ. ಈ ಪೈಕಿ 1,000-1,500 ಜನ ಬರಬಹುದು ಎಂದು ನಿರೀಕ್ಷಿಸಲಾಗಿದೆ.

**ಕಾನೂನು ಹೋರಾಟ; ನೌಕರರ ಕೂಟ:** 'ನಾವೂ ಮಾಹಿತಿ ಕಲೆಹಾಕಿದ್ದೇವೆ. ಸುದೀರ್ಘ ಅವಧಿ ರಜೆಯಲ್ಲಿದ್ದವರು, ಕೆಲಸಕ್ಕೇ ಬಾರದಿದ್ದವರ ಪಟ್ಟಿ ಮಾಡಿ ವಜಾಗೊಳಿಸಿದ್ದಾರೆ. ಅದಕ್ಕೆ ಹೆದರಿ ಉಳಿದ ನಾವೆಲ್ಲರೂ ಕರ್ತವ್ಯಕ್ಕೆ ಹಾಜರಾದರೆ, ಆ ನೂರು ಜನರೊಂದಿಗೆ ಲಕ್ಷ ಜನ ಅವಕಾಶ ಕಳೆದುಕೊಳ್ಳುತ್ತಾರೆ.

▶ 7ನೇ ಪುಟಕ್ಕೆ

# ಸಾರಿಗೆ ನೌಕರರ ವಿರುದ್ಧ ವಜ್ರಾಸ್ತ್ರ

**1ನೇ ಪುಟದಿಂದ** ▶ ಹಾಗಂತ, ವಜಾಗೊಳಿಸಿದವರ ಬಗ್ಗೆ ತಲೆಕೆಡಿಸಿಕೊಳ್ಳುವು ದಿಲ್ಲ ಎಂದಲ್ಲ, ನಿಗಮಗಳ ಈ ಕ್ರಮದ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದುಟಿ ಎಂದು ರಾಜ್ಯ ಸಾರಿಗೆ ನೌಕರರ ಕೂಟದ ಅಧ್ಯಕ್ಷ ಆರ್. ಚಂದ್ರಶೇಖರ್ ಉದಯ ವಾಣಿಟಿಗೆ ಹೇಳಿದರು. 'ಯಾವುದೇ ಗರಿಷ್ಠ ವೇತನ ಪರಿಷ್ಕರಣೆಯೂ ನಮಗೆ ಬೇಡ. 6ನೇ ವೇತನ ಆಯೋಗ ಶಿಫಾರಸು ಜಾರಿ ಮಾಡಿದರೆ, ಕರ್ತವ್ಯಕ್ಕೆ ಬರುತ್ತೇವೆ. ಇಲ್ಲದಿದ್ದರೆ ಇಲ್ಲ' ಎಂದೂ ಅವರು ಸ್ಪಷ್ಟಪಡಿಸಿದರು.

**ಇಂದು 25 ಸಾವಿರ ಖಾಸಗಿ ವಾಹನ:** ಶನಿವಾರದಿಂದ ಬುಧವಾರದವರೆಗೆ ಸರಣಿ ರಜೆ ಇದೆ. ಆದ್ದರಿಂದ ಶುಕ್ರವಾರ ರಾತ್ರಿಯಿಂದ ಊರುಗಳಿಗೆ ತೆರಳುವವರ ಸಂಖ್ಯೆ ಅಧಿಕವಾಗಿದೆ. ಈ ಹಿನ್ನೆಲೆಯಲ್ಲಿ ಸುಮಾರು 25ರಿಂದ 26 ಸಾವಿರ ಖಾಸಗಿ ವಾಹನಗಳನ್ನು ರಸ್ತೆಗಿಳಿಸಲು ಸಾರಿಗೆ ಇಲಾಖೆ ನಿರ್ಧರಿಸಿದೆ. ಇದರಲ್ಲಿ ಕೆಲವರಿಗೆ ದೂರದ ಊರುಗಳಿಗೆ ಸೇವೆ ನೀಡುವಂತೆಯೂ ಸೂಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ನೆರೆ ರಾಜ್ಯಗಳಿಂದಲೂ ಬಸ್ ಸೇವೆಗೆ ಮನವಿ ಮಾಡಿದ್ದು ರೈಲುಗಳ ವ್ಯವಸ್ಥೆಯನ್ನೂ ಮಾಡಲಾಗಿದೆ.

ಇನ್ನು ಇಡೀ ದಿನ ಸುಮಾರು 400-500 ಬಸ್‌ಗಳು ಕಾರ್ಯಾಚರಣೆ ಮಾಡಿದ್ದು 20 ಸಾವಿರಕ್ಕೂ ಅಧಿಕ ಖಾಸಗಿ ವಾಹನಗಳು ಕಾರ್ಯಾಚರಣೆ ಮಾಡಿವೆ. ಈ ಪರ್ಯಾಯ ಸಾರಿಗೆ ವ್ಯವಸ್ಥೆ ಒಂದೆಡೆ ಅನುಕೂಲವಾಗಿದ್ದರೆ, ಮತ್ತೊಂದೆಡೆ ಪ್ರಯಾಣಿಕರಿಗೆ ಅನನುಕೂಲವೂ ಆಗಿವೆ. ಬೇಕಾಬಿಟ್ಟಿ ದರ ನಿಗದಿ ಮಾಡಿ, ಸುಲಿಗೆ ಮಾಡುತ್ತಿವೆ ಎಂಬ ಆರೋಪ ಕೇಳಿಬರುತ್ತಿದೆ.

**ಮುಖ್ಯರಸ್ತೆಗೆ ಸೀಮಿತವಾದ ಸೇವೆ!:** ಅಲ್ಲದೆ, ಹೆಚ್ಚು ಹಣ ವಸೂಲು ಮಾಡಿದರೂ ಕೆಲವು ಮಾರ್ಗಗಳಿಗೆ ಖಾಸಗಿ ವಾಹನಗಳು ಸೇವೆ ನೀಡುತ್ತಿಲ್ಲ. ಹೆಚ್ಚು ಆದಾಯ ಬರುವ ಮಾರ್ಗಗಳಿಗೆ ಸೀಮಿತವಾಗಿವೆ. ಇನ್ನು ಹಳ್ಳಿಗಳಲ್ಲಿ ಇದರ ಸಮಸ್ಯೆ ತೀವ್ರವಾಗಿ ತಟ್ಟುತ್ತಿದೆ. ಉದಾಹರಣೆಗೆ ಬೆಂಗಳೂರಿನಿಂದ ಹೊಸಕೋಟೆಗೆ ಅಥವಾ ದೇವನಹಳ್ಳಿಗೆ ಸೇವೆ ನೀಡುತ್ತವೆ. ಅಲ್ಲಿಂದ ಹತ್ತಿರದ ಗ್ರಾಮಗಳು ಅಥವಾ ಬಡಾವಣೆಗಳಿಗೆ ಹೋಗುತ್ತಿಲ್ಲ. ಮುಖ್ಯರಸ್ತೆಯಿಂದ ಮಹಿಳೆಯರು, ವೃದ್ಧರು, ಮಕ್ಕಳನ್ನು ಕರೆದುಕೊಂಡು ಗೂಡು ಸೇರಲು ಪರದಾಡುವ ಸ್ಥಿತಿ ಇದೆ. ಸಾರಿಗೆ ಇಲಾಖೆ ಅಧಿಕಾರಿಗಳು ಇಂತಹ ಕಡೆಗೆ ಭೇಟಿ ಕೂಡ ನೀಡುತ್ತಿಲ್ಲ ಎಂದು ಕೆಲ ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದರು.

ಮುಷ್ಕರದಿಂದ ಶೇ. 98ರಷ್ಟು ಬಸ್‌ಗಳು ರಸ್ತೆಗಿಳಿದಿಲ್ಲ. ಡೀಸೆಲ್ ಖರ್ಚು ಇಲ್ಲ, ನೌಕರರ ಸಂಬಳ ನೀಡುವುದಿಲ್ಲ ಎಂದು ಸ್ವತಃ ಸಾರಿಗೆ ಸಂಸ್ಥೆಗಳು ಹೇಳಿವೆ. ಬಸ್‌ಗಳ ಸವಕಳಿ ಅಥವಾ ನಿರ್ವಹಣಾ ಖರ್ಚು ಇಲ್ಲ. ಆದಾಗ್ಯೂ ಸಾರಿಗೆ ನಿಗಮಗಳು 17 ಕೋಟಿ ನಷ್ಟ ತೋರಿಸಿವೆ. ಇದು ಹೇಗೆ ಸಾಧ್ಯ? ಈ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಸಾರಿಗೆ ನೌಕರರು ಒತ್ತಾಯಿಸಿದ್ದಾರೆ.

ಸಾರಿಗೆ ನಿಗಮಗಳು ತೋರಿಸಿರುವ ನಷ್ಟದ ಬಾಬ್ತು ಸಾಮಾಜಿಕ ಜಾಲತಾಣಗಳಲ್ಲಿ ಇಡೀ ದಿನ ಭಾರಿ ಚರ್ಚೆಯಾಯಿತು. ಈ ಮಧ್ಯೆ ಎರಡನೇ ದಿನದ ನಷ್ಟದ ಬಗ್ಗೆ ಸಾರಿಗೆ ನಿಗಮಗಳು ಮೌನವಾಗಿವೆ.